ಪ್ರಜಾವಾಣಿ ಗುರುವಾರ • ಜುಲೈ 28, 2016



ಪುಸ್ತಕಗಳ ದೇಣಿಗೆ ಕಾರ್ಯಕ್ರಮದಲ್ಲಿ ಸಾರ್ವಜನಿಕ ವ್ಯವಹಾರಗಳ ಕೇಂದ್ರದ ನಿರ್ದೇಶಕ ರಾಘವನ್ ಸುರೇಶ್, ಲಿಲಿ ಪಾಲ್, ಎಂ.ಎನ್. ವೆಂಕಟಾಚಲಯ್ಯ, ಕೆ.ಆರ್.ಎಸ್. ಮೂರ್ತಿ ಇದ್ದಾರೆ

# ಐಐಡಬ್ಲ್ಯುಸಿಗೆ 300 ಪುಸ್ತಕಗಳ ದೇಣಿಗೆ

ಬೆಂಗಳೂರು: ಸಾರ್ವಜನಿಕ ವ್ಯವಹಾರಗಳ ಕೇಂದ್ರ ಹಾಗೂ ಸಾರ್ವಜನಿಕ ವ್ಯವಹಾರಗಳ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಡಾ. ಸ್ಯಾಮ್ಯುಯಲ್ ಪಾಲ್ ಅವರ ಸ್ಮರಣಾರ್ಥ 300 ಪುಸ್ತಕಗಳನ್ನು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ (ಐಐಡಬ್ಲ್ಯುಸಿ) ಸಂಸ್ಥೆಯ ಗ್ರಂಥಾಲಯಕ್ಕೆ ದೇಣಿಗೆ ನೀಡಲಾಯಿತು.

ಸ್ಯಾಮ್ಯುಯಲ್ ಪಾಲ್ ಅವರು ಸಾರ್ವಜನಿಕ ವ್ಯವಹಾರಗಳಿಗೆ ಸಂಬಂಧಿಸಿದ ಮಹತ್ವದ ಕೃತಿಗಳನ್ನು ಸಂಗ್ರಹಿಸಿದ್ದರು. ಈ ಕೃತಿಗಳು ಸಾರ್ವಜನಿಕರ ಉಪಯೋಗಕ್ಕೆ ಸಿಗಬೇಕೆಂಬ ಉದ್ದೇಶದಿಂದ ಸ್ಯಾಮ್ಯುಯಲ್ ಪಾಲ್ ಅವರ ಪತ್ನಿ ಲಿಲಿ ಪಾಲ್ ಅವರು ಗ್ರಂಥಾಲಯಕ್ಕೆ ದೇಣಿಗೆ ನೀಡಿದರು.

ಐಐಡಬ್ಲ್ಯುಸಿ ಅಧ್ಯಕ್ಷ ಎಂ.ಎನ್. ವೆಂಕಟಾಚಲಯ್ಯ ಮಾತನಾಡಿ, 'ಪುಸ್ತಕಗಳು ಜ್ಞಾನದ ನದಿಗಳಿದ್ದಂತೆ. ಅವುಗಳನ್ನು ಮತ್ತೊಬ್ಬರ ಉಪಯೋಗಕ್ಕೆ ಮೀಸಲಿಡಬೇಕು. ಸಾರ್ವಜನಿಕ ವ್ಯವಹಾರಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಗ್ರಂಥಾಲಯಕ್ಕೆ ದೇಣಿಗೆ ನೀಡುವ ಮೂಲಕ ಲಿಲಿ ಪಾಲ್ ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ಇದರಿಂದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಅಭ್ಯರ್ಥಿಗಳು, ಸಾರ್ವಜನಿಕರಿಗೆ ಅನುಕೂಲವಾಗಲಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಾರ್ವಜನಿಕ ವ್ಯವಹಾರಗಳ ಕೇಂದ್ರದ ಮಂಡಳಿ ಸದಸ್ಯ ಕೆ.ಆರ್.ಎಸ್. ಮೂರ್ತಿ ಮಾತನಾಡಿ, 'ಉತ್ತಮ ಆಡಳಿತ ನೀಡಲು ಬೇಕಾದ ಅಂಶಗಳ ಬಗ್ಗೆ ಸಂಶೋಧನೆ ನಡೆಸಬೇಕು. ಸಾರ್ವಜನಿಕರ ಭಾಗವಹಿಸುವಿಕೆಯಿಂದ ಮಾತ್ರ ದೇಶದ ಪ್ರಗತಿ ಸಾಧ್ಯ' ಎಂದರು.